**ದಿನಾಂಕಃ 22-06-2026 ರಂದು** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ.ಜಿ.ಎಸ್.ಆರ್. ವಕೀಲ ರಿಂದಃ**

1. ಸಾಕ್ಷಿಯು 10 ಆರ್.ಟಿ.ಸಿ. ದೃಢೀಕೃತ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿ.ಡಿ.63 ರಿಂದ ನಿ.ಡಿ.72 ಎಂದು** ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ.ಜಿ.ಆರ್.ಆರ್. ವಕೀಲರಿಂದಃ**

ನನ್ನ ತಾತ ಗೂಳದ ಈರಣ್ಣ ರವರ ಹೆಂಡತಿ ಹನುಮಕ್ಕ. ನನ್ನ ತಾತ ಮತ್ತು ಅಜ್ಜಿಗೆ 8 ಜನ ಮಕ್ಕಳು ಅಂದರೆ 1ನೇ ರಂಗಮ್ಮ(ಮೃತ), 2ನೇ ತಿಮ್ಮವ್ವ (ಮೃತ), 3ನೇ ಸಿದ್ದಗಂಗಮ್ಮ, 4ನೇ ಸಿದ್ದಪ್ಪ, 5ನೇ ರಂಗಪ್ಪ(ನನ್ನ ತಂದೆ ಮೃತ), 6ನೇ ತಿಮ್ಮಪ್ಪ, 7ನೇ ಬಸವರಾಜು(ಮೃತ) ಮತ್ತು 8ನೇ ಲಕ್ಷ್ಮಯ್ಯ ಆಗಿರುತ್ತಾರೆ. ಮೇಲಿನ 8 ಜನ ಮಕ್ಕಳು ಮತ್ತು ನಾವುಗಳು ಜಂಟಿ ಕುಂಟುಂಬದ ಆಸ್ತಿಗಳ ಸ್ವಾಧೀನದಲ್ಲಿ ಇರುತ್ತೇವೆ ಎಂದರೆ ಸರಿ. ಹಾಲಿ ದಾವೆಯನ್ನು ಯಲಿಯೂರು ಗ್ರಾಮದ ಜಮೀನಿನ ಮೇಲೆ ಮತ್ತು ಮನೆಯ ಮೇಲೆ ನಾನೇ ಹಾಕಿರುತ್ತೇನೆ. 4 ರಿಂದ 7ನೇ ದಾವಾ ಸ್ವತ್ತುಗಳನ್ನು ಜಂಟಿ ಕುಟುಂಬದ ಆಧಾಯದಿಂದ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ನಮ್ಮ ಕುಟುಂಬದ ಆಧಾಯದಿಂದ ಕೋಳಿ ಫಾರಂ ಮತ್ತು ನ್ಯಾಯ ಬೆಲೆ ಅಂಗಡಿ ಮಾಡಿರುತ್ತೇವೆ ಎಂದರೆ ಸರಿ. ನಿವೇಶನಗಳನ್ನು 4ನೇ ಪ್ರತಿವಾದಿ ಗಂಡ ಬಸವರಾಜು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಕುಟುಂಬದ ವ್ಯವಹಾರವನ್ನು 4ನೇ ಪ್ರತಿವಾದಿ ಗಂಡ ಮತ್ತು 5ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ವಾದಿಗೆ ಮತ್ತು ನನ್ನ ತಂದೆಗೆ ಬರುವ ಭಾಗ ಡಿಕ್ರಿ ಆದರೆ ನನ್ನ ತಕರಾರು ಇಲ್ಲ ಎಂದರೆ ಎಲ್ಲಾ ಆಸ್ತಿಯಲ್ಲಿ ಬಂದರೆ ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಪ್ರತಿವಾದಿಗಳು ಒಟ್ಟು ಕುಟುಂಬದ ಜಂಟಿ ಸ್ವಾಧೀನಾನುಭವದಲ್ಲಿರುತ್ತೇವೆ ಎಂದರೆ ಸರಿ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಹೆಚ್ಚುವರಿ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.